**ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಶಿಕಾರಿಪುರ.**

**ಸಿಸಿ ನಂ.** 412/2025

| | | |
|---|---|---|
| ಸಾಕ್ಷಿದಾರರ ಹೆಸರು | ನಾಗರಾಜಪ್ಪ | ಪಿಡಬ್ಲ್ಯು- 3 |
| ತಂದೆಯ ಹೆಸರು | ರಾಮಪ್ಪ | ಸಿಡಬ್ಲ್ಯು- 3 |
| ವಯಸ್ಸು | 42 | |
| ಉದ್ಯೋಗ | ಕೂಲಿ | ಪ್ರತಿಜ್ಞೆ ಮೇರೆಗೆ ದಿನಾಂಕಃ |
| ವಾಸ | ಹಳೇ ಧೂಪದಹಳ್ಳಿ | **21.04.2026.** |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸಸಅ ರವರಿಂದಃ-**

1. ನನಗೆ ಆರೋಪಿಗಳ ಪರಿಚಯ ಇದೆ, ಅವರು ನನಗೆ ಅಕ್ಕತಂಗಿಯರು. ಚಾಸಾ – 1 ನನ್ನ ನಾದಿನಿ. ಚಾಸಾ – 2 ನನ್ನ ಹೆಂಡತಿ.

2. ದಿಃ 30.04.2025 ರಂದು ನನ್ನ ನಾದಿನಿ ಅಂದರೆ ಚಾಸಾ – 1 ರವರು ತನ್ನ ಗಂಡ ಮೃತಪಟ್ಟಿದ್ದ ಕಾರಣ ನಮ್ಮ ಮನೆಗೆ ಬಂದಿದ್ದರು. ನನಗೂ ನನ್ನ ತಂಗಿಯರಿಗೂ ಸಣ್ಣಪುಟ್ಟ ಗಲಾಟೆ ಇದ್ದು, ದಿಃ 01.05.2025 ರಂದು ಬೆಳಿಗ್ಗೆ 7.30 ಕ್ಕೆ ನಾನು ಕೆಲಸಕ್ಕೆ ಹೋಗಿದ್ದು, ನಮ್ಮ ಮನೆಯ ಬಾಗಿಲಿನಲ್ಲಿ ನನ್ನ ನಾದಿನಿಗೆ ಮತ್ತು ನನ್ನ ಹೆಂಡತಿಗೆ ಹೊಡೆದಾಟ ಆಗಿದೆ. ಆ ನಂತರ ನನಗೆ ನಮ್ಮ ಮನೆಯವರು ಪೋನ್ ಮಾಡಿ ನನ್ನ ತಂಗಿಗೆ ಹೊಡೆದಿದ್ದಾರೆ, ಬನ್ನಿ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು ಎಂದು ಹೇಳಿದ್ದು, ನಾನು ಬೈಕ್ ತೆಗೆದುಕೊಂಡು ಹೋಗಿ ಚಾಸಾ – 1 ರವರನ್ನು ಕರೆದುಕೊಂಡು ಠಾಣೆಗೆ ಬಂದು ಅವರು ಹೇಳಿದ ಮೇರೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆ ಬಗ್ಗೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಮಾನ್ಯ ಸ.ಸ. ಅಭಿಯೋಜಕರಿಂದಃ</u>**

3. ಆ ದಿನ ಗಲಾಟೆಯಾದ ಸಮಯದಲ್ಲಿ ನಾನೂ ಸಹ ಮನೆಯಲ್ಲಿ ಇದ್ದೆ ಎಂದರೆ ಸರಿ. ಆ ದಿನ ಆರೋಪಿಗಳು ನನಗೆ ಮತ್ತು ಚಾಸಾ – 1 ರವರಿಗೆ ಅನೈತಿಕ ಸಂಬಂಧ ಕಲ್ಪಿಸಿ ಚಾಸಾ – 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ಆಗ ನನ್ನ ತಾಯಿ ಕರಿಬಸಮ್ಮ, ನನ್ನ ಸಹೋದರಿಯರಾದ ಗಂಗಮ್ಮ, ನೀಲಮ್ಮ ಎಲ್ಲರೂ ಸೇರಿ ಚಾಸಾ – 1 ರವರ ಕೂದಲು ಮತ್ತು ಬಟ್ಟೆ ಹಿಡಿದು ಎಳೆದಾಡಿ ಕೈಯಿಂದ ಅವರ ಮೈಕೈಗೆ ಹೊಡೆದಿದ್ದಾರೆ ಎಂದರೆ ಸರಿ. ಆಗ ನಾನು ಮತ್ತು ಚಾಸಾ– 2 ರವರು ಸೇರಿ ಗಲಾಟೆ ಬಿಡಿಸಿದ್ದೇವೆ ಎಂದರೆ ಸರಿ. ನಂತರ ನಾನು ಚಾಸಾ – 1 ರವರನ್ನು ಶಿಕಾರಿಪುರ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇನೆ ಎಂದರೆ ಸರಿ. ಈ ರೀತಿ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ.

**<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಯಾವುದೇ ಸಕಾರಣವಿಲ್ಲದ ಕಾರಣ ವಕೀಲರ ಕೋರಿಕೆ ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಬೆರಳಚ್ಚು ಮಾಡಲಾಗಿದೆ.**

**ಓ ಹೇ ಕೇ ಸ ಇದೆ.**

**ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಶಿಕಾರಿಪುರ.**